# ಶ್ರೀರಾಮಕೃಷ್ಣರು ಹಾಗೂ ಸೂಜಿಗಲ್ಲು ಮತ್ತು ಪರುಷಮಣಿ

ಸಿ.ಎಸ್. ಮಂಗಳಮ್ಮ

ಶ್ರೀರಾಮಕೃಷ್ಣರ ದಿವ್ಯ ತೇಜೋಮಯ ಜೀವನದಲ್ಲಿ ಅವರ ಸಂಪರ್ಕಕ್ಕೆ ಬಂದು ಪುನೀತರಾದ ಜೀವಿಗಳು ಎಷ್ಟೋ! ಆದರೆ ಶ್ರೀಮಾತೆ, ಸ್ವಾಮೀಜಿಯವರಂಥ ಮಹಾಮಹಿಮರನ್ನೂ ಆಧ್ಯಾತ್ಮಿಕತೆಯ ಎತ್ತರಕ್ಕೆ ಏರಿಸಿದ ಅದ್ಭುತವನ್ನು ನಾವು ಗಮನಿಸಬೇಕು. ಈ ಹಿನ್ನೆಲೆಯಲ್ಲಿ ಬರೆದಿರುವ ಲೇಖಕಿ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು. ಅನೇಕ ಗ್ರಂಥಗಳನ್ನು ರಚಿಸಿರುವ ಅವರು ಈ ಪತ್ರಿಕೆಯಲ್ಲಿ ಹಲವು ಲೇಖನಗಳನ್ನು ಬರೆದಿದ್ದಾರೆ.

**ಓಂ ಸ್ಥಾಪಕಾಯ ಚ ಧರ್ಮಸ್ಯ ಸರ್ವಧರ್ಮಸ್ವರೂಪಿಣೇ ।**
**ಅವತಾರವರಿಷ್ಠಾಯ ರಾಮಕೃಷ್ಣಾಯ ತೇ ನಮಃ ॥**

ವಿಶ್ವವಿಜೇತ ವೀರಸನ್ಯಾಸಿ ಸ್ವಾಮಿ ವಿವೇಕಾನಂದರು ತಮ್ಮ ಗುರುಗಳ ಮಹಿಮೆಯನ್ನು ಕೊಂಡಾಡುತ್ತಾ ಪ್ರಣಾಮವನ್ನು ಸಲ್ಲಿಸಿದ ದಿವ್ಯಸ್ತೋತ್ರವಿದು. ಧರ್ಮಕ್ಕೆ ಅಪಚಾರವಾಗುತ್ತಿದ್ದಾಗ ತಿದ್ದಿ, ಸರಿಪಡಿಸಿ ಲೋಕಕಲ್ಯಾಣ ಮಾಡುವುದಕ್ಕಾಗಿ ಭಗವಂತ ಧರೆಗಿಳಿದು ಬರುತ್ತಾನೆ. ಇದನ್ನೇ 'ಅವತಾರ' ಎನ್ನುತ್ತೇವೆ. ದೇಶ, ಕಾಲಕ್ಕೆ ತಕ್ಕಂತೆ ವೇಷ ಧರಿಸಿ ಬಂದು ದುಷ್ಟ ಶಿಕ್ಷಣ – ಶಿಷ್ಟ ರಕ್ಷಣ ಕಾರ್ಯ ಮಾಡುತ್ತಾನೆ. ನಮ್ಮ ಪುರಾಣಗಳಲ್ಲಿ ಇವುಗಳ ವರ್ಣನೆಗಳನ್ನು ನಾವು ಕೇಳಿದ್ದೇವೆ. ವಿಶೇಷವಾಗಿ ದಶಾವತಾರಗಳು ಪ್ರಸಿದ್ಧವಾಗಿವೆ. ಅವುಗಳಲ್ಲಿ ಜಲಚರಗಳು, ಮೃಗಗಳೂ ಸಹ ಲೋಕಹಿತಕ್ಕಾಗಿ ಭಗವಂತನ ಕಾರ್ಯಗಳನ್ನು (ವೇಷಧಾರಿಗಳಾಗಿ) ನಿರ್ವಹಿಸಿರುವುದನ್ನು ತಿಳಿಯಬಲ್ಲೆವು. ರಾಮ ಮತ್ತು ಕೃಷ್ಣನ ಅವತಾರಗಳು ಸಹಜವಾಗಿ ಸಾಮಾನ್ಯ ಮಾನವ ರೂಪದಲ್ಲಿಯೇ ಧರ್ಮಸಂಸ್ಥಾಪನೆ ಮಾಡಿ ಮೆರೆದಿರುವುದು ಎಲ್ಲರೂ ಬಲ್ಲ ವಿಚಾರವೇ ಆಗಿದೆ. ನ್ಯಾಯ, ನೀತಿ, ಧರ್ಮ ಹಾಗೂ ಸತ್ಯ ಇವು ಜೀವನದ ನಾಲ್ಕು ಆಧಾರ ಸ್ತಂಭಗಳು. ಕೆಲವೊಮ್ಮೆ ಲೋಕಹಿತಕ್ಕಾಗಿ ಇವುಗಳು ಕಠಿಣ ಪರಿಸ್ಥಿತಿಗಳನ್ನು ಎದುರಿಸಬೇಕಾಗುತ್ತದೆ. ಸದುದ್ದೇಶಕ್ಕಾಗಿ ಮಾಡುವ ಕೆಲಸಗಳಿಗೆ ಇವು ಅನಿವಾರ್ಯವಾಗುತ್ತವೆ. ಸಾಮಾಜಿಕ ಪರಿವರ್ತನೆಗಾಗಿ ಹೋರಾಡಲೇಬೇಕಲ್ಲವೆ?

ಸೂಜಿಗಲ್ಲು ಮತ್ತು ಪರುಷಮಣಿ ಎರಡೂ ಕಲ್ಲುಗಳೇ! ಗುಣದಲ್ಲಿ ಭಿನ್ನತೆ ಇದೆ. ಸೂಜಿಗಲ್ಲು ಕಬ್ಬಿಣವನ್ನು ಸೆಳೆಯುತ್ತದೆ. ಪರುಷಮಣಿ ತನ್ನ ಸಂಪರ್ಕಕ್ಕೆ ಬಂದ ಲೋಹಗಳೆಲ್ಲವನ್ನೂ ಬಂಗಾರವನ್ನಾಗಿ ಪರಿವರ್ತಿಸಿ ಬಿಡುತ್ತದೆ. ಅವತಾರ ಪುರುಷರ ಜೀವನವನ್ನು ಈ ಎರಡೂ ಶಿಲೆಗಳಿಗೆ ಹೋಲಿಸಬಹುದು. ಕಬ್ಬಿಣದಂತಹ ಕ್ಷುದ್ರ, ಅಧರ್ಮ, ಅನ್ಯಾಯ, ಅನೀತಿ ಇತ್ಯಾದಿಗಳನ್ನು ತಮ್ಮ ನಡೆನುಡಿಗಳಿಂದ ಸೆಳೆದು, ಕುಗ್ಗಿಸುತ್ತಾರೆ. ಸಹವಾಸದಿಂದ ಪರಿವರ್ತನೆಗೊಳಿಸುವ ಪರುಷಮಣಿಯೂ ಆಗಿ ಪರಿಶುದ್ಧರನ್ನಾಗಿ ಮಾಡುತ್ತಾರೆ. ಇವೆರಡರ ಮಧ್ಯದ ಬದುಕು ಸಾಧನೆಯ ಕಾಲ. ಧರ್ಮಸಂಸ್ಥಾಪನೆಗಾಗಿ ಅವತಾರ ಪುರುಷರು ತಮ್ಮ ಕಠಿಣ ಸಾಧನೆಗಳಿಂದ



ಪಡೆದ ಉತ್ತಮ ಫಲವನ್ನು ಲೋಕಹಿತಕ್ಕಾಗಿ ಹಂಚಿ, ಉದ್ಧರಿಸುತ್ತಾರೆ. ಶ್ರೀರಾಮಕೃಷ್ಣರ ಜೀವನವನ್ನು ಅವಲೋಕಿಸಿದಾಗ ಇದರ ಒಳಾರ್ಥವನ್ನು ಸ್ವಲ್ಪಮಟ್ಟಿಗಾದರೂ ಅರಿಯಬಹುದು. ನಮ್ಮ ಬದುಕನ್ನು ಹಸನುಗೊಳಿಸಿಕೊಳ್ಳಬಹುದು.

ಅವತಾರ ಪುರುಷರ ಜೀವನ ಬಾಲ್ಯದಿಂದಲೂ ಒಂದು ರೀತಿಯ ಅಸಾಮಾನ್ಯ ರೀತಿಯಲ್ಲಿಯೇ ನಡೆದಿರುತ್ತದೆ. ತಾತ್ಕಾಲಿಕವಾಗಿ ಅದರ ಅರಿವು ಆಗುವುದಿಲ್ಲ. ಎಲ್ಲೋ ಕೆಲವು ಮಹನೀಯರಿಗೆ ತಿಳಿದು ಧನ್ಯತೆಯನ್ನು ಅನುಭವಿಸುತ್ತಾರೆ. ತಳಹದಿ ಚೆನ್ನಾಗಿ, ಗಟ್ಟಿಯಾಗಿದ್ದರೆ ಮೇಲೇಳುವ ಕಟ್ಟಡವೂ ಭದ್ರವಾಗಿರುತ್ತದೆ.

ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಜಗತ್ತಿಗೆ ಇತ್ತಿರುವ ಅಭಯವಾಣಿ 'ಧರ್ಮಕ್ಕೆ ಅಪಚಾರ ಉಂಟಾಗಿ, ಅಧರ್ಮ ತಲೆಎತ್ತಿದಾಗ ತಾನೇ ಧರೆಯಲ್ಲಿ ಅವತರಿಸಿ, ದುಷ್ಟಶಿಕ್ಷಣ-ಶಿಷ್ಟರಕ್ಷಣೆ ಮಾಡುತ್ತೇನೆ' ಎಂಬುದಾಗಿದೆ. ಶ್ರೀರಾಮಕೃಷ್ಣರು ಅವತರಿಸಿದ ಕಾಲ ದೇವರು ಧರ್ಮಗಳ ಹೆಸರಿನಲ್ಲಿ ನಡೆಯುತ್ತಿದ್ದ ಅನ್ಯಾಯ ಅತ್ಯಾಚಾರ

ಗಳಿಂದ ಸಾಮಾಜಿಕ ಜೀವನ ಅತ್ಯಂತ ದುರ್ಭರವಾಗಿತ್ತು. ರಾಜಕೀಯ, ಧಾರ್ಮಿಕ ಆರ್ಥಿಕವಾಗಿಯೂ ಬಹಳ ಶೋಚನೀಯವಾಗಿತ್ತು. ಮೂಢನಂಬಿಕೆ, ಪುರೋಹಿತರ ಹಾಗೂ ಜಮೀನ್ದಾರರ ನಡವಳಿಕೆಗಳಿಂದ ಜನ ರೋಸಿ ಹೋಗಿದ್ದರು. ಧರ್ಮದ ಹೆಸರಿನಲ್ಲಿ ತಿರುಳನ್ನು ಬಿಟ್ಟು ಕರಟಕ್ಕಾಗಿ ಹೋರಾಡುತ್ತಿದ್ದರು. ಇದಕ್ಕೆ ಕಾರಣ ಶತಮಾನಗಳಿಂದ ಆದ ಅನ್ಯದೇಶಿಯರ ಆಕ್ರಮಣ, ದಬ್ಬಾಳಿಕೆಗಳಿಂದ ಮೂಲ ತತ್ತ್ವದ ಮೇಲೆ ಪರಕೀಯರ ವಿಧರ್ಮಗಳ ಪ್ರಭಾವಗಳು ಮೆರೆದು, ಧರ್ಮದ ಅರ್ಥವೇ ಬದಲಾಗಿಬಿಟ್ಟಿತು. ಇದನ್ನು ವಿರೋಧಿಸಿ ಪುನಃ ಧರ್ಮಸಂಸ್ಥಾಪನೆ ಮಾಡಲು ಕಾಲ-ಕಾಲಕ್ಕೆ ಅನೇಕ ಮಹನೀಯರು ಪ್ರಯತ್ನಿಸಿದರು. ಆದರೆ ಪೂರ್ಣ ಗೆಲುವನ್ನೇ ಸಾಧಿಸಲಾಗಿರಲಿಲ್ಲ. ಈ ಬದಲಾವಣೆಗೆ ಅಸ್ತ್ರ-ಶಸ್ತ್ರಗಳು ನಿರುಪಯೋಗವೆನಿಸಿದವು. ಚಾತುರ್ಯದಿಂದ ನೈಜತೆಯತ್ತ ಸೆಳೆದು, ಕೃತಕತೆಯಿಂದ ಮುಕ್ತಗೊಳಿಸಿ ಪರಿವರ್ತನೆಗೊಳಿಸಬೇಕಿತ್ತು. ಈ ನಿಟ್ಟಿನಲ್ಲಿ ಶ್ರೀರಾಮಕೃಷ್ಣರು ಜಯಶೀಲರಾದರು. ತಮ್ಮ ನಡೆ-ನುಡಿಗಳಿಂದ ಸೂಜಿಗಲ್ಲಿನಂತೆ ತಮ್ಮತ್ತ ಸೆಳೆದರು. ವಾಗಸ್ತ್ರದಿಂದ, ಪರುಷಮಣಿಯಂತೆ ತಮ್ಮ ಸಹವಾಸದಿಂದ ಪರಿವರ್ತನೆಯನ್ನು ಮಾಡಿದರು. ಭಾವಪರಿವರ್ತನೆ ಮಾಡಿ ಸರ್ವಧರ್ಮ ಸಂಸ್ಥಾಪಕರೆನಿಸಿದರು. 'ಅವತಾರವರಿಷ್ಠ'ರಾಗಿ ವಂದಿಸಲ್ಪಟ್ಟರು. ಇದು ಹೇಗಾಯಿತು? ಅವರ ಜೀವನವನ್ನು ಅವಲೋಕಿಸಿದಾಗ ಅವರವರ ಮತಿಗೆ ತಕ್ಕಂತೆ ಅರಿಯಬಹುದು.

ಕೆಲವರು ಹುಟ್ಟುವಾಗಲೇ ಪೂರ್ವಜನ್ಮ ಸಂಸ್ಕಾರಕ್ಕೆ ತಕ್ಕಂತೆ ವಿಶೇಷತೆಗಳನ್ನು ಪಡೆದಿರುತ್ತಾರೆ. ಭವಿಷ್ಯದ ಬದುಕಿಗೆ ಇದು ತಳಪಾಯವಾಗಿರುತ್ತದೆ. ಸತ್ಯಪರಿಪಾಲನೆಗಾಗಿ ಬಡತನವನ್ನೇ ಒಪ್ಪಿಕೊಂಡಂತಹ, ದೈವನಂಬಿಕಸ್ಥರೂ, ಸುಸಂಸ್ಕೃತರೂ, ಸರಳಜೀವಿಗಳೂ ಆಗಿ ಕಟ್ಟಾ ಸಂಪ್ರದಾಯರೆನಿಸಿದ ಖುದೀರಾಮ ಚಟ್ಟೋಪಾಧ್ಯಾಯ ಮತ್ತು ಚಂದ್ರಮಣಿ ದೇವಿ ದಂಪತಿಗಳ ಮಗನಾಗಿ, ಗಯಾವಿಷ್ಣುವಿನ ಪ್ರಸಾದರೂಪವಾಗಿ ಜನಿಸಿದನು ಗದಾಧರ! ಬಾಲ್ಯದಿಂದಲೇ ಕಾಮಾರಪುಕುರದಲ್ಲಿ ಜನಪ್ರಿಯರಾಗಿ ಬೆಳೆದನು. ಆಕರ್ಷಕ ವ್ಯಕ್ತಿತ್ವ, ಸ್ನೇಹಮಯಿ, ಪ್ರಕೃತಿ ಸೌಂದರ್ಯವನ್ನು ಕಂಡು ಮೈಮರೆತು ಆತ್ಮನಂದವನ್ನು ಪಡೆಯುತ್ತಿದ್ದನು. ಹಾಗೂ ಈ ರಹಸ್ಯವನ್ನು ಅರಿಯಲು ಏಕಾಂಗಿಯಾಗಿ, ಏಕಾಂತದಲ್ಲಿ ಹೆಚ್ಚು ಸಮಯವನ್ನು ಕಳೆಯುತ್ತಿದ್ದನು. ಭಗವಂತನ ನಾಮ, ಜಪ, ಕೀರ್ತನೆಗಳಲ್ಲಿ ಧ್ಯಾನಸ್ಥನಾಗಿರುತ್ತಿದ್ದನು. ಬಾಲ್ಯದಲ್ಲಿಯೇ ಕಂಡ ತಂದೆಯವರ ಮರಣ, ಗದಾಧರನ ಮನಸ್ಸಿನ ಮೇಲೆ ನಶ್ವರ ಜಗತ್ತಿನ ಕುರಿತು ಪ್ರಭಾವ ಬೀರಿತು. ಹಳ್ಳಿಯಲ್ಲಿ ಬಾಲಕನ ನಡೆ-ನುಡಿ ಎಲ್ಲರಿಗೂ ಆಕರ್ಷಣೆಯವಾಗಿತ್ತು. ಸತ್ಯ ಪಾಲನೆಗಾಗಿಯಾಗಲೀ, ಲೌಕಿಕ ವಿಷಯಗಳ ವಿಚಾರವಾದ ವಾದ ವಿವಾದಗಳೇ ಆಗಿರಲಿ ತನ್ನ ಸರಳ ಭಾಷೆಯಲ್ಲಿ ಪರಿಹಾರ ಸೂಚಿಸುತ್ತಿದ್ದುದು ವಿಶೇಷವಾಗಿತ್ತು. ಲೌಕಿಕರ ಮಧ್ಯೆ ಇದ್ದ ಅಲೌಕಿಕರೂ ಕೂಡ ಗದಾಧರನ ಮಾತಿಗೆ ತಲೆದೂಗುತ್ತಿದ್ದರು. ಶ್ರೀನಿವಾಸ ಶಾಂಖಾರಿ ಎಂಬ ವೃದ್ಧರು ಒಂದು ದಿನ ಬಾಲಕನಿಗೆ ಗಂಧವನ್ನು ಲೇಪಿಸಿ, ಹೂವಿನ ಮಾಲೆಯನ್ನು ಹಾಕಿ, 'ಮುಂದೆ ನಿನ್ನ ಲೀಲೆಯನ್ನು ನಾನು ಕಾಣಲಾರೆ' ಎನ್ನುತ್ತಾ ನಮಸ್ಕರಿಸಿದರು. ಇದು 'ಬೆಳೆಯುವ ಪೈರನ್ನು ಮೊಳಕೆಯಲ್ಲಿ ಕಾಣು' ಎಂಬುದಕ್ಕೆ ಒತ್ತುಕೊಡುತ್ತದೆ. ದೇವರು, ಧರ್ಮಗಳ ನಂಬಿಕೆಯಲ್ಲಿ ಗದಾಧರನ ಬದುಕು ಸಾಗುತ್ತಿತ್ತು.

ಕಾಲಚಕ್ರ ಉರುಳುತ್ತಲೆ ಇರುತ್ತದೆ. ಗದಾಧರನ ಅಣ್ಣ ರಾಮಕುಮಾರನಿಗೆ ಮನೆಯ ಹೊಣೆಗಾರಿಕೆ ಇದ್ದುದ್ದರಿಂದ, ಸಂಸಾರವನ್ನು ತೂಗಿಸಲು ಕೊಲ್ಕತ್ತೆಯಲ್ಲಿ ಸಂಸ್ಕೃತ ಪಾಠಶಾಲೆಯನ್ನು ತೆರೆದ. ಜೊತೆಗೆ ಪೌರೋಹಿತ್ಯವನ್ನೂ ನಡೆಸುತ್ತಿದ್ದ. ಗದಾಧರನೂ ಬೆಳೆದು ಯೌವನಕ್ಕೆ ಕಾಲಿಡುತ್ತಿದ್ದ. ಅವನ ಜೀವನಕ್ಕೊಂದು ದಾರಿ ತೋರಿಸಿ, ಸ್ವಾವಲಂಬಿಯನ್ನಾಗಿ ಮಾಡಬೇಕಾದದ್ದು ತನ್ನ ಕರ್ತವ್ಯವೆಂದರಿತು, ತನ್ನ ಜೊತೆಯಲ್ಲಿ ತಮ್ಮನನ್ನು ಕೊಲ್ಕತ್ತೆಗೆ ಕರೆತಂದನು. ಅಲ್ಲಿ ಕೆಲವು ಶ್ರೀಮಂತರ ಮನೆಗಳಲ್ಲಿ 'ದೇವರಪೂಜೆ'ಯ ಕೆಲಸವನ್ನು ವಹಿಸಿದನು. ಗದಾಧರನಿಗೆ ಇದು ಸಂತೋಷವಾಯಿತು. ದೈವನಂಬಿಕೆ ಉಳ್ಳವನಾದ್ದರಿಂದ ಆಸಕ್ತಿಯಿಂದ ಅರ್ಚನೆ ಮಾಡಿ, ಭಕ್ತಿಯಿಂದ ಹಾಡುತ್ತಿದ್ದ. ಇದು ಮನೆಯವರಿಗೆಲ್ಲರಿಗೂ ಅತ್ಯಂತ ಸಂತೋಷ! ಸಂತೃಪ್ತಿಯನ್ನು ತರುತ್ತಿತ್ತು. ಆದರೂ ಅಣ್ಣ ರಾಮಕುಮಾರನಿಗೆ ತಮ್ಮನ ಬಗ್ಗೆ ಚಿಂತೆ ಇತ್ತು. ಒಂದು ವೃತ್ತಿಯಲ್ಲಿ ಅವನನ್ನು ನಿಲ್ಲಿಸಬೇಕೆಂದು, ಒಂದು ದಿನ 'ನೀನು ಲೌಕಿಕ ವಿದ್ಯೆಯ ಕಡೆ ಗಮನ ಕೊಡು, ಅದು ನಿನ್ನ ಭವಿಷ್ಯಕ್ಕೆ ಅನುಕೂಲವಾಗುತ್ತದೆ' ಎಂದಾಗ, ಗದಾಧರನು, 'ಮೂರು ಕಾಸಿನ ರೊಟ್ಟಿ ಸಂಪಾದನೆ ಮಾಡುವ ವಿದ್ಯೆ ನನಗೆ ಬೇಕಿಲ್ಲ. ಶಾಶ್ವತದತ್ತ ಕೊಂಡೊಯ್ಯುವ ಕಡೆಗೆ ನನ್ನ ಮನಸ್ಸು ತವಕಿಸುತ್ತದೆ' ಎಂದು ಕಡ್ಡಿ ಎರಡು ತುಂಡು ಮಾಡಿದಂತೆ ಹೇಳಿಬಿಟ್ಟ! ವಯಸ್ಸಿಗೆ ಬಂದಿರುವ ತಮ್ಮ, ಒತ್ತಾಯ ಮಾಡಿ ಪ್ರಯೋಜನವಿಲ್ಲವೆಂದು ಸುಮ್ಮನಾದರೂ, ಮನಸ್ಸಿನಲ್ಲಿ ಚಿಂತೆ ಇತ್ತು. ಒಂದು ರೀತಿಯಲ್ಲಿ ಯೋಚಿಸಿದರೆ, ಗದಾಧರನಿಗೆ ಭವಿಷ್ಯದ ಬುನಾದಿ ಹಾಕಿದವನೂ ಅಣ್ಣನೇ. ತನ್ನ ಜವಾಬ್ದಾರಿಯನ್ನು ನಿರ್ವಹಿಸಿದನೆನ್ನಬಹುದು. ಪ್ರಕೃತಿಯ ರಹಸ್ಯವನ್ನು ಅರಿಯುವ ದಾರಿಯಲ್ಲಿ, ದೈವದಲ್ಲಿ ನಂಬಿಕೆಯಿದ್ದ ತಮ್ಮನಿಗೆ ಕೆಲವು ಮನೆಗಳಲ್ಲಿ ಪೂಜೆಯ ಉದ್ಯೋಗವನ್ನು ಕಲಿಸಿಕೊಟ್ಟಂತಾಯಿತು. ಭಗವದಿಚ್ಛೆಯಂತೆ ನಡೆಯಲಿ ಎನ್ನುತ್ತಾ ರಾಮಕುಮಾರನು ತಮ್ಮನ ಬಗ್ಗೆ ಏನನ್ನೂ ನಿಷ್ಕರ್ಷಿಸಲಾರದೆ, ದಿನಗಳೆಯುತ್ತಿದ್ದ.

ಗದಾಧರನನ್ನು ಇನ್ನು ಮೇಲೆ ಶ್ರೀರಾಮಕೃಷ್ಣರೆಂದೇ ಕರೆಯೋಣ. ಇಲ್ಲಿಂದ ಅವರ ಬದುಕಿನ ಬಂಡಿ ಸಾಗಿ, ಗುರಿ ಮುಟ್ಟಿದ್ದು 'ಅವತಾರ ವರಿಷ್ಠ'ರೆನಿಸಿ ಮೆರೆದದ್ದು. ಅವರ ಭಾವನೆಗೆ ಸಿಕ್ಕ ಆಸೆ ಯಾವುದು? ಸೂಜಿಗಲ್ಲಿನಂತೆ ತನ್ನತ್ತ ಆಕರ್ಷಿಸಿದ್ದು ಯಾವ ಶಕ್ತಿ ? ಇದು ಹೇಗಾಯಿತು? ಯಥಾಶಕ್ತಿ ಅರಿಯಲು ಪ್ರಯತ್ನಿಸಿ, 'ಅವತಾರ ವರಿಷ್ಠ'ನ ಸ್ಮರಣೆಯಿಂದ ಆನಂದಿಸೋಣ.

ದೈವರಹಸ್ಯವನ್ನು ಅರಿಯುವ ಕುತೂಹಲವಿದ್ದ ಶ್ರೀರಾಮಕೃಷ್ಣರಿಗೆ ಇದು ಪೂರ್ವ ಪ್ರಾಥಮಿಕ ಶಾಲೆ ಆಯಿತು. ದೇವರನ್ನು ಕಲ್ಪವೃಕ್ಷ ಎನ್ನುತ್ತೇವೆ. ಅದರ ಕೆಳಗೆ ನಿಂತು ಬೇಡಿದಾಗ, ನೀಡುವ ಕಾಮಧೇನು ಭಗವಂತ! ಶ್ರೀರಾಮಕೃಷ್ಣರ ಮನಸ್ಸಿನ ಆಕಾಂಕ್ಷೆಗೆ

ಯಾವ ರೀತಿಯಲ್ಲಿ ದೈವ ಸಹಾಯ ಒದಗಿತು? ಕೊಲ್ಕತ್ತೆಯ ಬಳಿ ದಕ್ಷಿಣೇಶ್ವರದಲ್ಲಿ ರಾಣಿ ರಾಸಮಣಿ ಎಂಬ ಶ್ರೀಮಂತ ಭಕ್ತೆ 'ಭವತಾರಿಣಿ'ಯ ಮಂದಿರವನ್ನು ಕಟ್ಟಿಸಿದಳು. 'ಕಾಳಿ ಪದದಾಸಿ' ಎಂದೇ ಸಹಿ ಮಾಡುತ್ತಿದ್ದ ಭಕ್ತೆ! ಆದರೆ ಆಕೆ ಬೆಸ್ತರವಳು. ಆದ್ದರಿಂದ ಮೇಲ್ವರ್ಗದವರಾರೂ ಅಲ್ಲಿ ದೈವ ಪ್ರತಿಷ್ಠಾಪನೆಗಾಗಲೀ, ಪೂಜೆ ಮಾಡುವುದಕ್ಕಾಗಲೀ ಮುಂದೆ ಬರಲಿಲ್ಲ. ದೇವರು-ಧರ್ಮಗಳ ಗೊಂದಲವಿದ್ದ ಕಾಲವಲ್ಲವೆ? ರಾಮಕುಮಾರನು ಕೆಲವು ಶಾಸ್ತ್ರಾಧಾರಗಳಂತೆ ಒಂದು ಸಲಹೆಯನ್ನು ಸೂಚಿಸಿದ. 'ದೇವಸ್ಥಾನವನ್ನು ಬೇರೆಯವರಿಗೆ(ಮೇಲ್ವರ್ಗ) ದಾನ ಮಾಡುವುದು.' ಎಂದು. ರಾಣಿ ಅತ್ಯಂತ ಸಂತೋಷದಿಂದ ತನ್ನ ಕುಲಗುರುಗಳಿಗೆ ದೇವಸ್ಥಾನ ಹಾಗೂ ಅದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ದಾನ ಮಾಡಿಬಿಟ್ಟಳು! ನಂತರ ರಾಮಕುಮಾರನ ನೇತೃತ್ವದಲ್ಲಿಯೇ ಭಗವತಿಯ ಪ್ರತಿಷ್ಠಾಪನಾ ಮಹೋತ್ಸವ ವಿಜೃಂಭಣೆಯಿಂದ ನೆರವೇರಿತು. ನಂತರ ರಾಮಕುಮಾರನನ್ನೇ ಅರ್ಚಕನನ್ನಾಗಿಯೂ ನೇಮಿಸಿದಳು. ಈಗ ದಕ್ಷಿಣೇಶ್ವರದ ಭವತಾರಿಣಿಯ ಸನ್ನಿಧಿ ತೀರ್ಥಕ್ಷೇತ್ರವಾಯಿತು. ಯಾತ್ರಾರ್ಥಿಗಳಿಗೆ ಪವಿತ್ರ ಸಾನ್ನಿಧ್ಯವೂ ಒದಗಿದಂತಾಯಿತು.

ಶ್ರೀರಾಮಕೃಷ್ಣರಿಗೆ ಅಣ್ಣನ ಈ ಕೆಲಸ ಸಮಾಧಾನ ತರಲಿಲ್ಲ. ಸಂಪ್ರದಾಯಸ್ಥ ಕುಟುಂಬದಲ್ಲಿ ಬೆಳೆದಿದ್ದವರು. ಆದರೆ ದೈವದಲ್ಲಿ ನಂಬಿಕಸ್ಥನಾದ್ದರಿಂದ ಹೆಚ್ಚೇನೂ ಹೇಳಲಾಗಲಿಲ್ಲ.ಈಗ ಅನಿವಾರ್ಯವಾಗಿ ಅಣ್ಣ ಜೊತೆಯಲ್ಲಿಯೇ ನೆಲೆಸಿದರು. ಪೂಜಾ ಕಾರ್ಯಗಳಲ್ಲಿ ನೆರವು ನೀಡುತ್ತಿದ್ದರು. ರಾಮಕುಮಾರನಿಗೆ ಇದು ತೃಪ್ತಿಯನ್ನುಂಟುಮಾಡಿತು. ಭಗವತಿ ಶ್ರೀರಾಮಕೃಷ್ಣರನ್ನು ತನ್ನತ್ತ ಸೆಳೆಯತೊಡಗಿದಳು. ಶ್ರೀರಾಮಕೃಷ್ಣರ ಮನದಾಸೆಗೆ ಒತ್ತುಕೊಟ್ಟಂತಾಯಿತು. ವಿಧಿಬರಹ ರಾಮಕುಮಾರನಿಗೆ ಭಗವತಿಯ ಅರ್ಚಕನಾಗಿ ಸೇವೆ ಸಲ್ಲಿಸುವ ಬಹಳ ಅಲ್ಪಕಾಲಕ್ಕೆ ಮುಗಿದುಹೋಯಿತು. ಶ್ರೀರಾಮಕೃಷ್ಣರಿಗೆ ಪೂಜೆಯ ಜವಾಬ್ದಾರಿಯನ್ನು ವಹಿಸಿ, ಕಾಮಾರ ಪುಕುರಕ್ಕೆ ಹೋಗಿ ಬರುವೆನೆಂದು ಹೊರಟ ರಾಮಕುಮಾರನು ಊರನ್ನು ತಲುಪುವುದಕ್ಕೆ ಮುಂಚೆಯೇ ಕಾಲವಶವಾದನು! ಇದು ದೈವಲೀಲೆಯಲ್ಲದೆ ಮತ್ತೇನು? ಅಣ್ಣನ ಮರಣ ಶ್ರೀರಾಮಕೃಷ್ಣರಿಗೆ ನಶ್ವರ ಜಗತ್ತಿನ ಬಗ್ಗೆ ಮತ್ತಷ್ಟು ವೈರಾಗ್ಯವನ್ನು ತಂದಿತು. ಅವರು ಭವತಾರಿಣಿಯ ಸೇವೆಗೆ ಸಿದ್ಧರಾದರು.

ಶ್ರದ್ಧಾಭಕ್ತಿಪೂರ್ವಕವಾದ ಅರ್ಚನಾ ಕಾರ್ಯ ದೇವಸ್ಥಾನದ ಆಡಳಿತ ಮಂಡಲಿಯವರಿಗೂ ಮೆಚ್ಚುಗೆಯಾಯಿತು. ಪ್ರಕೃತಿಯ ರಹಸ್ಯವನ್ನು ಅರಿಯಬೇಕೆಂಬ ಶ್ರೀರಾಮಕೃಷ್ಣರ ಇಚ್ಛೆಗೆ ಒತ್ತು ಕೊಟ್ಟಿತು ಈ ಆರಾಧನಾ ಕಾರ್ಯ. ಬೇಡಿದ್ದನ್ನು ನೀಡವ ಕರುಣಾಮಯಿ ಭಗವತಿ ತನ್ನತ್ತ ಸೂಜಿಗಲ್ಲಿನಂತೆ ಸೆಳೆದುಕೊಂಡುಬಿಟ್ಟಳು! ಸಾಮಾನ್ಯವಾಗಿ ಶಿಕ್ಷಣ ಕ್ಷೇತ್ರದಲ್ಲಿ ಪ್ರಾಥಮಿಕ ಹಂತದಿಂದ ಪದವಿ ಪಡೆಯುವವರೆಗೆ ಕನಿಷ್ಠ ೧೨ ರಿಂದ ೧೫ ವರ್ಷಗಳು ಬೇಕಾಗುತ್ತದೆ. ಇಲ್ಲಿ ಭವತಾರಿಣಿಯ ಸನ್ನಿಧಿಯಲ್ಲಿ ತಮ್ಮ ಗುರಿ(ದೈವಸಾಕ್ಷಾತ್ಕಾರ)ಯನ್ನು ತಲುಪುವುದಕ್ಕೆ ಅಷ್ಟೇ ವರ್ಷಗಳ ಕಾಲ ಸಾಧನೆಯನ್ನು ಮಾಡಿ ಜಯಶೀಲರಾದರು. ಪ್ರತಿನಿತ್ಯ ಪೂಜೆ ಮಾಡುವಾಗ ಅವರ ಮನಸ್ಸಿನಲ್ಲಿ ಏಳುತ್ತಿದ್ದ ಸಂದೇಹ 'ಈ ಶಿಲಾ ಮೂರ್ತಿಯಲ್ಲಿಯೂ ಭಗವಂತನಿದ್ದಾನೆಯೆ? ದೇವರು ಎಲ್ಲೆಲ್ಲಿಯೂ ಇದ್ದಾನೆ ಎಂದಾದರೆ ಇಲ್ಲಿಯೂ ಇರಲೇಬೇಕು', ಈ ನಿಟ್ಟಿನಲ್ಲಿ ಆರಾಧಿಸುತ್ತಿದ್ದರು. ಭಕ್ತಿಯಿಂದ ಹಾಡುತ್ತಿದ್ದರು. ತನ್ಮಯರಾಗುತ್ತಿದ್ದರು. ಈ ರಹಸ್ಯವನ್ನು ಭೇದಿಸಲೇಬೇಕೆಂದು ಸಂಕಲ್ಪ ಮಾಡಿ, ಏಕಾಂತವಾಗಿ ಹತ್ತಿರದ ಕಾಡಿನಲ್ಲಿ ಕಠಿಣ ಸಾಧನೆಗೆ ಆರಂಭಿಸಿದರು.

ಸುಮಾರು ಹನ್ನೆರಡು ವರ್ಷಗಳ ಕಾಲ ಕಠಿಣ ಸಾಧನೆಯನ್ನು ಮಾಡಿದರು. ಈ ಮಧ್ಯೆ ಕಾಮಾರಪುಕುರದಲ್ಲಿದ್ದ ತಾಯಿ ಚಂದ್ರಮಣಿದೇವಿ ಮಗನಿಗೆ ಅನಾರೋಗ್ಯವೆಂಬ ಸುದ್ದಿ ಕೇಳಿ, ಊರಿಗೆ ಬರುವಂತೆ ಕರೆಕಳುಹಿಸಿದಳು. ತಾಯಿಯ ಮಾತಿನಂತೆ ಊರಿಗೆ ಬಂದರು. ತಾಯಿ ಔಷಧೋಪಚಾರ ಮಾಡಿದಳು. ಆಗ ಹಿರಿಯರು 'ವಯಸ್ಸಿಗೆ ಬಂದ ಮಗನಿಗೆ ಮದುವೆ ಮಾಡು, ಎಲ್ಲವೂ ಸರಿಹೋಗುತ್ತದೆ' ಎಂದರು. ಕನ್ಯೆಯನ್ನು ಹುಡುಕಲು ಹೊರಟಾಗ 'ಅಲ್ಲಿ ಇಲ್ಲಿ ಅಲೆದಾಡುವುದೇಕೆ? ಹತ್ತಿರದ ಜಯರಾಮಬಾಟಿಯಲ್ಲಿ ರಾಮಚಂದ್ರ ಮುಖರ್ಜಿಯ ಮನೆಯಲ್ಲಿ ನನಗಾಗಿಯೇ ಮೀಸಲಿರಿಸಿದ ಕನ್ಯೆ ಇದ್ದಾಳೆ. ಅಲ್ಲಿ ಪ್ರಯತ್ನಿಸಿ' ಎಂದು ಶ್ರೀರಾಮಕೃಷ್ಣರು ಹೇಳಿದರು. ಅದರಂತೆ ತಾಯಿ ಶುಭಕಾರ್ಯಕ್ಕೆ ಮುನ್ನಡೆದಳು. ಕನ್ಯೆ ಇದ್ದಾಳೆ. ಆದರೆ ಕೇವಲ ಐದೂವರೆ ವರ್ಷದ ಮುಗ್ಧಬಾಲೆ! ದೈವ ಸಂಕಲ್ಪ ಮೀರಲಾದೀತೆ? ಇಪ್ಪತ್ಮೂರು ವರ್ಷದ ಯುವಕ ಶ್ರೀರಾಮಕೃಷ್ಣರೊಂದಿಗೆ ಶಾರದಾದೇವಿಯವರ ವಿವಾಹ ನಡೆಯಿತು! ಶ್ರೀರಾಮಕೃಷ್ಣರ ಸಾಧನೆಗೆ 'ಶಕ್ತಿ'ಯಾಗಿ ಕೂಡಿದರು. ಮುಂದೆ ವಿಶ್ವಕ್ಕೆ ಆದರ್ಶವಾದ ದಂಪತಿಗಳಾಗಿ ಬಾಳಿದರು.

ನಂತರ ಪುನಃ ದಕ್ಷಿಣೇಶ್ವರಕ್ಕೆ ಬಂದು ಸಾಧನೆಯನ್ನು ಮುಂದುವರಿಸಿದರು. ಭವತಾರಿಣಿಯ ಸಾಕ್ಷಾತ್ಕಾರಕ್ಕಾಗಿ ಹಗಲಿರುಳೂ ಹಂಬಲಿಸತೊಡಗಿದರು. ಭಕ್ತಿಪರವಶರಾಗಿ ತಾಯಿಯನ್ನು ಕರೆಯುತ್ತಿದ್ದ ರೀತಿ, ಇತರರಿಗೆ ಲೌಕಿಕವಾಗಿ ತಮ್ಮ ತಾಯಿಯನ್ನು ಕಳೆದುಕೊಂಡು ಶೋಕಿಸುತ್ತಿದ್ದಾರೆ ಎನ್ನುವಂತಿತ್ತು. ಭವತಾರಿಣಿ ಇವರಿಗೆ ಶಿಲಾ ವಿಗ್ರಹವಾಗಿರಲಿಲ್ಲ. ಸಾಕ್ಷಾತ್ ಚಿನ್ಮಯಿ! ಕಠಿಣ ಸಾಧನೆಗಳಿಂದ ಜರ್ಜರಿತವಾಗಿದೆ ದೇಹ. ಆದರೆ ಮನಸ್ಸು ಭಗವತಿಯ ದರ್ಶನಕ್ಕಾಗಿ ಕಾಯುತ್ತಿದೆ. ಜಗದಂಬೆಯ ದರ್ಶನವಾಗದ ಮೇಲೆ ಈ ನಶ್ವರ ದೇಹವಿದ್ದೇನು ಪ್ರಯೋಜನ? ಎಂದು ಯೋಚಿಸಿ, ತಮ್ಮ ಶರೀರವನ್ನು ಭಗವತಿಯ ಚರಣಗಳಲ್ಲಿ ಬಲಿ ಕೊಡಲು ಸಿದ್ಧರಾಗಿಬಿಟ್ಟರು! ಅತಿ ನೋವಾದಾಗಲೆ ಹುಣ್ಣು ಒಡೆದು ಒಳಗಿರುವ ರಕ್ತ ಕೀವು ಹೊರಗೆ ಬರುವುದಿಲ್ಲವೆ? ನಂತರ ನೆಮ್ಮದಿ ಆಗುತ್ತದೆ. ಒಂದು ಬೀಜವನ್ನು ನೆಲದಲ್ಲಿ ನೆಟ್ಟಾಗ ಅದು ಕೊಳೆತು ತನ್ನತನವನ್ನು ಕಳೆದುಕೊಂಡಾಗಲೇ ಹೊಸ ಮೊಳಕೆಯೊಡೆಯುವುದು. ಈಗ ಶ್ರೀರಾಮಕೃಷ್ಣರು ವ್ಯಾಕುಲಚಿತ್ತರಾಗಿ ತಮ್ಮನ್ನೇ ಅರ್ಪಿಸಲು ಸಿದ್ಧರಾದಾಗ, ತಾಯಿ ಸುಮ್ಮನಿರುತ್ತಾಳೆಯೆ? ಭವತಾರಿಣಿಯ ಸಾಕ್ಷಾತ್ಕಾರವಾಯಿತು! ಶ್ರೀರಾಮಕೃಷ್ಣರ ಮಾತಿನಲ್ಲಿಯೇ ಆಗಿನ ಅನುಭವವನ್ನು ಕೇಳೋಣ. ''ಇದ್ದಕ್ಕಿದ್ದಂತೆ ಬೆಳಕು ಹರಡಿತು. ಕೋಟಿ ಸೂರ್ಯಪ್ರಕಾಶದಂತಹ ಬೆಳಕು! ಎತ್ತ ನೋಡಿದರೂ ಬೆಳಕೇ! ಬೆಳಕಿನ ಸಾಗರದಲ್ಲಿ ನಾನು ಮುಳುಗಿ ಹೋದೆ (ಬೆಳಕು

ಅರಿವಿನ ಸಂಕೇತ). ಕಾಲ ಕಳೆದದ್ದು ತಿಳಿಯಲಿಲ್ಲ. ಕ್ರಮೇಣ ವಾಸ್ತವಿಕತೆಗೆ ಬಂದಾಗ ಕಣ್ಣೀರು ಧಾರೆಯಾಗಿ ಹರಿಯುತ್ತಿತ್ತು.'' ಭವತಾರಿಣಿ ಭಕ್ತನಿಗೊಲಿದಳು! ಅರಿತರು 'ಜಗವೆಲ್ಲ ಶಿವಮಯ!' 'ಶಕ್ತಿ'ಯದೇ ಸಾಮ್ರಾಜ್ಯ ! ಹುಲ್ಲು ಕಡ್ಡಿಯೂ ಅವಳ ಅನುಮತಿ ಇಲ್ಲದೆ ಚಲಿಸಲಾರದು. ದೇವನೊಬ್ಬ ನಾಮ ಹಲವು; ಜೀವ-ಶಿವ ಅಭೇದ್ಯ; ಜೀವಸೇವೆಯೇ ಶಿವಸೇವೆ ಎಂಬ ಮಂತ್ರದ್ರಷ್ಟಾರ ರಾದರು! ಬಾಲ್ಯದಿಂದ ಹುಡುಕುತ್ತಿದ್ದ ರಹಸ್ಯ ಪ್ರತ್ಯಕ್ಷವಾಗಿ ಬಿಟ್ಟಿತು. ಸೂಜಿಗಲ್ಲಿನಂತೆ ತನ್ನತ್ತ ಸೆಳೆದ ಭವತಾರಿಣಿ ತನ್ನ ಸಹವಾಸ ದಲ್ಲಿ (ಪರುಷ ಮಣಿ) ಅವರನ್ನು ಶುದ್ಧ ಬಂಗಾರವನ್ನಾಗಿ ಪರಿ ವರ್ತಿಸಿ ಬಿಟ್ಟಳು. ಆಗಿನ ಸಾಮಾಜಿಕ ಪರಿವರ್ತನೆಗೆ, ಲೋಕಕಲ್ಯಾಣ ಕ್ಕಾಗಿ ಶ್ರೀರಾಮಕೃಷ್ಣರ ಮೂಲಕ ಸಂದೇಶ ನೀಡಲು ಭಗವತಿ ಭವ ತಾರಿಣಿ ದರ್ಶನವಿತ್ತು ಹರಸಿದಳು!

ಶ್ರೀರಾಮಕೃಷ್ಣರ ನಡೆ-ನುಡಿಗಳಲ್ಲಿ ಬದಲಾವಣೆ ಕಂಡು ಸುತ್ತ ಲಿನ ಜನರು, ಇವರಿಗೆ ಬುದ್ಧಿಭ್ರಮಣೆ ಆಗಿದೆ ಎನ್ನಲಾರಂಭಿಸಿ ದರು. ಸದಾ ಭಗವತಿಯ ಸ್ಮರಣೆಯಲ್ಲಿಯೇ ಮೈಮರೆಯುತ್ತಿದ್ದವ ರಿಗೆ, ಈಗ ಭಗವತಿಯ ಪೂಜೆಯನ್ನು ಕ್ರಮಬದ್ಧವಾಗಿ ಮಾಡ ಲಾಗುತ್ತಿರಲಿಲ್ಲ. ಮಥುರನಾಥನು ಭಗವತಿಯ ಪೂಜೆಗಾಗಿ ಬೇರೆ ಯವರನ್ನು ನೇಮಿಸಿದನು. ಶ್ರೀರಾಮಕೃಷ್ಣರಲ್ಲಿ ಇದ್ದ ಭಕ್ತಿ, ಗೌರವಗಳು ಇಮ್ಮಡಿಯಾದವು. ಈಗ ಶ್ರೀರಾಮಕೃಷ್ಣರು ಇತರ ಧರ್ಮಗಳ ಗುರಿ ಏನೆಂಬುದನ್ನು ಸಾಧಿಸಿ ಅರಿತರು. 'ಎಲ್ಲ ಧರ್ಮ ಗಳ ಗುರಿಯೂ ಒಂದೇ. ಭಗವಂತನ ಕಡೆಗೆ ಹೋಗಲು ನಾನಾ ದಾರಿಗಳು. ಎಷ್ಟು ಮತಗಳಿವೆಯೋ ಅಷ್ಟು ಪಥಗಳು.' ಭಗವತಿ ಶ್ರೀರಾಮಕೃಷ್ಣರ ನಾಲಿಗೆಯಲ್ಲಿ ನೆಲೆಸಿದಳು; ನಲಿದಳು; ಅವರು ನುಡಿದದ್ದೆಲ್ಲ ವೇದವಾಕ್ಯಗಳೇ ಆದವು. ಭವತಾರಿಣಿಯ ಮಂದಿ ರದ ಪ್ರಾಂಗಣದ ಒಂದು ಕೊಠಡಿಯೇ ವೇದಿಕೆ ಆಯಿತು. ಒಂದು ವಸ್ತು ಬಿಕರಿಗೋ, ವ್ಯವಹಾರಕ್ಕೋ ಬರಬೇಕಾದರೆ ಪ್ರಚಾರವಾಗಲೇ ಬೇಕು. ಭಗವತಿ ಈ ಕಾರ್ಯಕ್ಕಾಗಿಯೇ ಕರೆಸಿದಳೋ ಎಂಬಂತೆ ಭೈರವಿ ಬ್ರಾಹ್ಮಣಿಯ ಆಗಮನವಾಯಿತು. ಆಕೆ ಹಲವು ಗ್ರಂಥ ಗಳನ್ನು ಓದಿ ತಿಳಿದಿದ್ದಳು. ತಂತ್ರಶಾಸ್ತ್ರಜ್ಞೆ.

ಶ್ರೀರಾಮಕೃಷ್ಣರನ್ನು ಭೇಟಿ ಮಾಡಿದ ಬ್ರಾಹ್ಮಣಿ ಅವರಿಗೆ ತಂತ್ರ ಶಾಸ್ತ್ರವನ್ನು ಕಲಿಸಿ, ಅವರಿಂದ ಆ ಪದ್ಧತಿ ಪ್ರಕಾರ ಸಾಧನೆ ಮಾಡಿಸಿ ದಳು. ಅವಳು ಶ್ರೀರಾಮಕೃಷ್ಣರು ಅವತಾರ ಪುರುಷರು ಎಂಬು ದನ್ನು ಸಾರಿದ್ದಲ್ಲದೆ, ಪಂಡಿತರ ಸಭೆಯಲ್ಲಿ ಶಾಸ್ತ್ರಾಧಾರವನ್ನು ನೀಡಿ ಸಾಬೀತುಪಡಿಸಿದಳು ಕೂಡ.

ಶ್ರೀರಾಮಕೃಷ್ಣರಿದ್ದ ಕೊಠಡಿಗೆ ಕೊಲ್ಕತ್ತೆಯಿಂದ ಜನರು ಬರ ಲಾರಂಭಿಸಿದರು. ಎಲ್ಲ ವರ್ಗಗಳ, ಎಲ್ಲ ರೀತಿಯ ಜನರೂ ಬಂದರು. ಅವರ ನಾಲಿಗೆಯಿಂದ ಹೊರಡುತ್ತಿದ್ದ ಪ್ರತಿವಾಕ್ಯಗಳೂ ಸೂಜಿಗಲ್ಲಿನಂತೆ ಸೆಳೆಯುತ್ತಿದ್ದವು. ಅವರವರ ಭಾವಕ್ಕೆ ತಕ್ಕಂತೆ ವಚನಗಳು ಸಂತೃಪ್ತಿಯನ್ನು ನೀಡುತ್ತಿತ್ತು. ಆಡುಭಾಷೆಯಲ್ಲಿ, ಸರಳವಾಗಿ ದಿನನಿತ್ಯದ ಸುತ್ತಮುತ್ತಲಿನ ಉದಾಹರಣೆಗಳೊಂದಿಗೆ ಸಮಸ್ಯೆಯನ್ನು ಪರಿಹರಿಸುತ್ತಿದ್ದರು. ಅದು ಸನಾತನ ಧರ್ಮದ ತಿರುಳೇ ಆಗಿರುತ್ತಿದ್ದು ಕ್ರಾಂತಿಯನ್ನು ಉಂಟುಮಾಡಿತು. ಜೊತೆಗೆ ಶ್ರೀರಾಮಕೃಷ್ಣರ ಭಾವಪೂರ್ಣವಾದ ಭಕ್ತಿಗೀತೆಗಳು, ಕೀರ್ತನೆ, ನರ್ತನಗಳು, ಅವರತ್ತ ಸೆಳೆಯುವ ಅದ್ಭುತ ಸಾಧನಗಳಾದವು. ಶ್ರೀರಾಮಕೃಷ್ಣರು ಅವತರಿಸಿರುವುದು ಸಾಮಾಜಿಕ ಗೊಂದಲ ಗಳನ್ನು ಪರಿಹರಿಸಿ ಶಾಂತಿ, ಧರ್ಮಸಂಸ್ಥಾಪನೆಗಾಗಿ. ಇದು ಹರಡ ಬೇಕಾಗಿದೆ. ಅದಕ್ಕಾಗಿ ಶ್ರೀರಾಮಕೃಷ್ಣರು ಅದಕ್ಕೆ ತಕ್ಕ ವ್ಯಕ್ತಿಗಳನ್ನು ಹುಡುಕಿ, ಆರಿಸಿಕೊಳ್ಳಲಾರಂಭಿಸಿದರು. 'ಮನೆ ಗೆದ್ದು ಮಂದಿ ಗೆಲ್ಲು' ಎಂಬಂತೆ ಈ 'ದೇವನೊಬ್ಬ ನಾಮ ಹಲವು; ಜೀವ ಸೇವೆಯೇ ಶಿವ ಸೇವೆ' ಮಹಾಮಂತ್ರಗಳನ್ನು ಅನುಷ್ಠಾನಕ್ಕೆ ತರಲು ಮನೆಯಿಂ ದಲೇ ಪ್ರಾರಂಭಿಸಿದರು. ಅದೂ ವಿಶೇಷವಾಗಿ ತಾವು ಕೈ ಹಿಡಿದ ಮಡದಿಯೇ ಪ್ರಥಮ ಶಿಷ್ಯೆ!

ಶಾರದಾದೇವಿಯವರಿಗೆ ವಿವಾಹವಾದಾಗ ಐದೂವರೆ ವರ್ಷ ವಷ್ಟೆ. ಏಳು ವರ್ಷದವರಾದಾಗ ತಾನು ವಿವಾಹಿತೆ-ಗೃಹಿಣಿ ಎಂದರಿ ತರು. ಆಗ ಒಂದು ಸಂಕಲ್ಪ ಮಾಡಿದರು, 'ಪತಿಗೆ ತಕ್ಕ ಸತಿಯಾಗಿ ಬಾಳಬೇಕು' ಎಂದು. ಪತಿಯ ಸ್ವಭಾವದ ಪರಿಚಯವಾದಾಗ ಸುಮಾರು ಹದಿಮೂರು ವರ್ಷದವರು. ಶ್ರೀರಾಮಕೃಷ್ಣರು ಸಾಮಾನ್ಯ ರಂತಲ್ಲ. ಅಸಾಮಾನ್ಯರು ಎಂದರಿತರು. ಕಲ್ಪತರು ಬೇಡಿದ್ದನ್ನು ಕೊಡುವುದು ಎನ್ನುತ್ತೇವೆ ಅಲ್ಲವೆ? ಶಾರದಾದೇವಿಯವರ ಸಂಕಲ್ಪಕ್ಕೆ ಒತ್ತು ಕೊಟ್ಟು ನಡೆಸಿತು ದೈವಾನುಗ್ರಹ. ಪತಿಯ ನಡೆ-ನುಡಿಗಳು ಸತಿಯನ್ನು ಸೆಳೆಯಿತು. ಮುಂದೆ ದಕ್ಷಿಣೇಶ್ವರದಲ್ಲಿ ಗೃಹಸ್ಥಜೀವನ ದಲ್ಲಿ ಅನುಷ್ಠಾನಕ್ಕೆ ತಂದರು 'ಕರ್ಮಯೋಗಿನಿ'ಯಾಗಿ. ಶಾರದಾ ದೇವಿಯವರ ಕಾಮನೆಯನ್ನು ಲೌಕಿಕದಿಂದ ಅಲೌಕಿಕದ ಕಡೆಗೆ ಪರಿ ವರ್ತಿಸಿದರು. ಪರುಷಮಣಿಯ ಸಹವಾಸದಿಂದ ಆಧ್ಯಾತ್ಮಿಕತೆಯ ದಾರಿಯಲ್ಲಿ ಸಹಧರ್ಮಿಣಿಯಾಗಿ ಗುರಿಮುಟ್ಟುವಲ್ಲಿ ಜಯಶೀಲ ರಾದರು. ಸೂಜಿಗಲ್ಲಿಂತೆ ಸೆಳೆದಿದ್ದ ಶ್ರೀರಾಮಕೃಷ್ಣರು, ಕಾಯಕ ದಿಂದಲೇ ಕೈಲಾಸ ಪಡೆಯಬಹುದು ಎಂಬುದನ್ನು ಸತಿಯ ಮೂಲಕ ಜಗತ್ತಿಗೆ ಸಾರಿದರು. ಶಾರದಾದೇವಿಯವರಿಗೆ ಪತಿಯೇ ಸರ್ವಸ್ವ ಎಂಬ ಭಾವನೆ ಬಾಲ್ಯದಿಂದಲೂ ಇದ್ದಿತು. ಪತಿಯ ಲ್ಲಿಯೇ ಭಗವತಿಯನ್ನು ಕಂಡರು. ಶ್ರೀರಾಮಕೃಷ್ಣರಿಗೆ ಶಾರದಾ ದೇವಿಯವರು ಸಾಕ್ಷಾತ್ ಜಗಜ್ಜನನಿ! ಜಗತ್ತೆಲ್ಲವೂ ಶಿವಮಯ ವೆಂದು ಸಾಕ್ಷಾತ್ಕಾರ ಪಡೆದವರು, ಸತಿಯನ್ನು ಭವತಾರಿಣಿಯ ಅಂಶವೆಂದು ಆವಾಹಿಸಿ, ಆರಾಧಿಸಿ, ತಪಸ್ಸಿನ ಫಲವನ್ನೆಲ್ಲ ಅರ್ಪಿಸಿ ದರು. ಜಗನ್ಮಾತೆಯ ಪಟ್ಟಕ್ಕೇರಿಸಿದರು.

ಶ್ರೀಮಾತೆಯವರು ಸಣ್ಣಹಳ್ಳಿಯಲ್ಲಿ ಶ್ರೀರಾಮಕೃಷ್ಣರ ಅವ ತಾರದ ಕಾರ್ಯವನ್ನು ಮುಂದುವರಿಸಿದರು. ಇಡೀ ಜಗತ್ತಿಗೇ ಹರಡಿ ಸಮಾಜಕಲ್ಯಾಣಕ್ಕಾಗಿ ಬದುಕನ್ನು ಮೀಸಲಿರಿಸಿ ಸಂದೇಶ ವಾಹಕರಾದ ಮತ್ತೊಬ್ಬರನ್ನು ಕಾಣಬೇಕಲ್ಲವೆ? ಮೊದಲೇ ಹೇಳಿರು ವಂತೆ ದೇವರು-ಧರ್ಮಗಳ ಗೊಂದಲದಲ್ಲಿ ಆಗಿನ ಸಮಾಜ ನೊಂದು-ಬೆಂದು ಬಸವಳಿದಿದ್ದಿತು. ಶ್ರೀರಾಮಕೃಷ್ಣರು ದಕ್ಷಿಣೇಶ್ವರ ದಲ್ಲಿ ತಮ್ಮದೇ ಆದ ರೀತಿಯಲ್ಲಿ ಇದರ ಪರಿಹಾರವನ್ನು ಕಂಡು ಕೊಂಡು, ಜಗತ್ತಿಗೆ ತಿಳಿಸಲು ಸಿದ್ಧರಾದಾಗ, ಕೋಲ್ಕತೆಯ ಜನ ಈ ಯೋಗೀಂದ್ರನ 'ವಚನ'ಗಳಿಂದ ಸೆಳೆಯಲ್ಪಟ್ಟರು. ಆಂಗ್ಲ ವಿದ್ಯಾ ಭ್ಯಾಸದ ಪರಿಣಾಮವಾಗಿ ಸನಾತನ ಧರ್ಮವನ್ನು ಮರೆಯುತ್ತಿದ್ದ

ತರುಣ ಪೀಳಿಗೆಯವರೂ ಶ್ರೀರಾಮಕೃಷ್ಣರತ್ತ ಧಾವಿಸಿದರು. ಹಾಗೆ ಬರುವವರಲ್ಲಿ ಕೆಲವು ಯುವಕರನ್ನು ಆರಿಸಿಕೊಂಡು ತರಬೇತಿಯನ್ನು ಕೊಡಲಾರಂಭಿಸಿದರು. ಅವರವರ ಭಾವಕ್ಕೆ ತಕ್ಕಂತೆ, ಸೂಜಿಗಲ್ಲಿನಂತಹ ತಮ್ಮ ವಾಕ್‌ಸುಧೆಯಿಂದ ಅರಿವು ಮೂಡಿಸಿದರು. ನರೇಂದ್ರನಾಥ ದತ್ತ ಶ್ರೀಮಂತ ಹಾಗೂ ಧೀಮಂತ ಯುವಕ. 'ದೇವರಿದ್ದಾನೆಯೆ?' ಎಂಬ ಸಂಶಯದ ಸುಳಿಯಲ್ಲಿ ಸಿಲುಕಿ, ಅಂತಹ ಗಾಢವಾದ ಪ್ರಶ್ನೆಗೆ ಉತ್ತರಿಸುವವರಿದ್ದಾರೆಯೇ ಎಂದು ಕೋಲ್ಕತ್ತದಲ್ಲಿ, ಕಂಡ ಕಂಡ ಹಿರಿಯರಲ್ಲಿ, ಮಹಾನುಭಾವರಲ್ಲಿ ಪರಿಹಾರ ಕಾಣಲು ಹುಡುಕುತ್ತಿದ್ದಾಗ, ಅವನ ಕಾಲೇಜಿನ ಪ್ರಾಧ್ಯಾಕರೊಬ್ಬರು 'ಪ್ರಕೃತಿಯ ಪ್ರತಿ ವಸ್ತುವಿನಲ್ಲಿಯೂ ಭಗವಂತನ ಇರುವಿಕೆಯನ್ನು ಕಂಡು, ಆನಂದಿಸುತ್ತಿರುವ ಯೋಗೀಂದ್ರರೊಬ್ಬರು ದಕ್ಷಿಣೇಶ್ವರದಲ್ಲಿ ಇದ್ದಾರೆ. ಅವರನ್ನು ಕಾಣಬಹುದು' ಎಂದು ಸುಳುಹನ್ನಿತ್ತರು. ಈ ಮಾತು ನರೇಂದ್ರನನ್ನು ದಕ್ಷಿಣೇಶ್ವರದತ್ತ ಸೂಜಿಗಲ್ಲಿನಂತೆ ಸೆಳೆಯತೊಡಗಿತು.

ನರೇಂದ್ರನಾಥನ ಭಕ್ತಿಪೂರ್ವಕ ಹಾಡಿಗೆ ಶ್ರೀರಾಮಕೃಷ್ಣರು ಮೈಮರೆತರು. ದಕ್ಷಿಣೇಶ್ವರಕ್ಕೆ ಬರುವಂತೆ ಕರೆಕೊಟ್ಟರು. ಪರಸ್ಪರರ ಭೇಟಿ ಜಗತ್ತಿನ ಕಲ್ಯಾಣಕ್ಕೆ ನಾಂದಿಯಾಯಿತು. ನರೇಂದ್ರ ದಕ್ಷಿಣೇಶ್ವರಕ್ಕೆ ಬಂದ, ಎಂದಿನಂತೆ ತನ್ನ ಮನಸ್ಸಿನಲ್ಲಿದ್ದ ಪ್ರಶ್ನೆಯನ್ನು ಅವರ ಮುಂದಿಟ್ಟ – 'ದೇವರಿದ್ದಾನೆಯೆ?' ಎಂದು. ಸಹಜವಾಗಿ, ಸರಳವಾಗಿ, ಸುಲಲಿತವಾಗಿ 'ದೇವರಿದ್ದಾನೆ. ಈಗ ನಾನು ನಿನ್ನನ್ನು ಕಾಣುವುದಕ್ಕಿಂತಲೂ ಸ್ಪಷ್ಟವಾಗಿ ಕಾಣಬಹುದು. ಆದರೆ ಯಾರಿಗೆ ಬೇಕಾಗಿದೆ ದೇವರು? ಹೆಂಡತಿ–ಮಕ್ಕಳಿಗಾಗಿ ಕೊಡಗಟ್ಟಲೆ ಕಣ್ಣೀರು ಹರಿಸುತ್ತಾರೆ. ದೇವರಿಗಾಗಿ ಅಳುವವರು ಯಾರಿದ್ದಾರೆ?' ಎಂದು ಶ್ರೀರಾಮಕೃಷ್ಣರು ಮರುಪ್ರಶ್ನೆಯನ್ನು ಹಾಕಿದರು. ಇಲ್ಲಿಯವರೆಗೂ ನರೇಂದ್ರನಿಗೆ ಈ ರೀತಿಯಿಂದ ಪರಿಹಾರವನ್ನು ಹೇಳಿದವರಿರಲಿಲ್ಲ. ಈ ಮಾತು ಸೂಜಿಗಲ್ಲಿನಂತೆ ಅವನನ್ನು ಅವರತ್ತ ಸೆಳೆಯಿತು. ನಂತರ ಸುಮಾರು ನಾಲ್ಕು ವರ್ಷಗಳ ಕಾಲ ಅವರ ಸಹವಾಸದಲ್ಲಿ ಶುದ್ಧ ಬಂಗಾರವಾಗಿ ಪರಿವರ್ತಿಸಲ್ಪಟ್ಟ! ಕೆಲವು ಆಪ್ತ ಶಿಷ್ಯರುಗಳಿಗೆ ತರಬೇತಿ ನಿಡುತ್ತಿದ್ದ ಶ್ರೀರಾಮಕೃಷ್ಣರು ನರೇಂದ್ರನಾಥನಲ್ಲಿ ವಿಶೇಷತೆಯನ್ನು ಕಂಡು, ತಮ್ಮ ಆಧ್ಯಾತ್ಮಿಕ ಸಾಧನೆಯ ಫಲವನ್ನೆಲ್ಲ ಧಾರೆ ಎರೆದುಬಿಟ್ಟರು! ನರೇಂದ್ರನ ಸಂಶಯ ಪಿಶಾಚಿ ಓಡಿಹೋಯಿತು. ಗುರು, ಶಿಷ್ಯನ ಪ್ರಗತಿಯನ್ನು ಮನಸಾರೆ ಮೆಚ್ಚಿದರು. ಜ್ಞಾನಪಿಪಾಸುವಿನ ದಾಹವನ್ನು ತಣಿಸಿದರು. ಭಗವಂತನ ಅಸ್ತಿತ್ವವನ್ನು ಅರಿಯಲು ಜ್ಞಾನಮಾರ್ಗವೂ ಆಗಬಹುದೆಂಬುದನ್ನು ಸಾಬೀತು ಪಡಿಸಿದರು.

ಶ್ರೀರಾಮಕೃಷ್ಣರ ಮಹಾಸಮಾಧಿಗೆ ಒಂದೆರಡು ದಿನ ಮುಂಚೆ, ತಮ್ಮ ಬಳಿಯಲ್ಲಿದ್ದ ನರೇಂದ್ರನನ್ನು ತದೇಕ ದೃಷ್ಟಿಯಿಂದ ನೋಡುತ್ತಿದ್ದಾರೆ. ನರೇಂದ್ರನಾಥನ ಮೈಯಲ್ಲಿ ವಿಶೇಷವಾದ ಶಕ್ತಿ ಸಂಚಾರವಾದಂತಾಯಿತು. ನಂತರ ಹೇಳುತ್ತಾರೆ 'ನನ್ನಲ್ಲಿದ್ದುದನ್ನೆಲ್ಲ ನಿನಗೆ ಧಾರೆ ಎರೆದುಬಿಟ್ಟಿದ್ದೇನೆ. ನಾನು ಈಗ ಫಕೀರ. ನೀನು ಬಯಸಿದ್ದೆಲ್ಲವೂ ನಿನಗೆ ಸಿಕ್ಕಿದೆ. ಆದರೆ ನಿನ್ನಿಂದ ಲೋಕಕಲ್ಯಾಣವಾಗ ಬೇಕಾಗಿದೆ. ಆದ್ದರಿಂದ ಬೀಗದ ಕೈ ನನ್ನ ಬಳಿ ಇದೆ. ಸಮಯ ಬಂದಾಗ ತೆರೆಯುತ್ತೇನೆ' ಎಂದರು. ನರೇಂದ್ರನಾಥನಿಗೆ ಸ್ವಹಿತಕ್ಕಿಂತ ಸಮಾಜಕ್ಕಾಗಿ ಬಾಳು ಎಂಬುದನ್ನು ತಿಳಿಸಿದರು. ಹಾಗೂ ಆಪ್ತ ಶಿಷ್ಯರುಗಳ ಜವಾಬ್ದಾರಿಯನ್ನು ವಹಿಸಿ, ಆ ಮೂಲಕ ಜಗತ್ತಿಗೆ ಸಂದೇಶವನ್ನು ಸಾರುವ ಹೊಣೆಗಾರಿಕೆಯನ್ನು ವಹಿಸಿದರು. ನರೇಂದ್ರನಾಥನ ಮನಸ್ಸಿನಲ್ಲಿ ಆಗ ಒಂದು ಸಂದೇಹ ಮೂಡಿತು. 'ಇಂತಹ ಪರಿಸ್ಥಿತಿಯಲ್ಲಿಯೂ ಇವರು ಅವತಾರ ಪುರುಷರೆಂದು ಹೇಳಬಲ್ಲರೆ?' ಎಂದು. ಕೂಡಲೇ ಮಾತನಾಡಲು ಶಕ್ತಿ ಇಲ್ಲದಿದ್ದರೂ ಅತ್ಯಂತ ಪ್ರಯಾಸದಿಂದ 'ಹಿಂದೆ ಯಾರು ರಾಮನಾಗಿದ್ದನೋ ಮತ್ತು ಕೃಷ್ಣನಾಗಿದ್ದನೋ ಈಗ ಅವರೇ ರಾಮಕೃಷ್ಣ ಗಿದ್ದಾರೆ' ಎಂದಾಗ ನರೇಂದ್ರ ಲಜ್ಜಿತನಾಗಿ ತಲೆಬಾಗಿಬಿಟ್ಟ!

ಈ ರೀತಿ ತಮ್ಮ ಸಹವಾಸದಿಂದ ನರೇಂದ್ರನನ್ನು ದಿವ್ಯತೆಯ ಕಡೆಗೆ ಪರಿವರ್ತಿಸಿ, ಆಗಿನ ಸಾಮಾಜಿಕ ಗೊಂದಲಕ್ಕೆ ಪರಿಹಾರ ಸೂಚಿಸುವ ಕಾರ್ಯಕ್ಕೆ ಸಿದ್ಧಗೊಳಿಸಿದರು. ಮುಂದೆ ಆಪ್ತಶಿಷ್ಯರುಗಳು ನರೇಂದ್ರನ ನಾಯಕತ್ವದಲ್ಲಿ ಸಂನ್ಯಾಸ ಸ್ವೀಕರಿಸಿದರು.

ನರೇಂದ್ರನಾಥ 'ಸ್ವಾಮಿ ವಿವೇಕಾನಂದ'ರಾದರು. ಪರಿವ್ರಾಜಕರಾಗಿ ಸುತ್ತುತ್ತಾ, ಭಾರತದ ದಕ್ಷಿಣದ ತುದಿಯಲ್ಲಿ, ಕನ್ಯಾಕುಮಾರಿಯ ಸನ್ನಿಧಿಯಲ್ಲಿ ಸಮುದ್ರದ ಮಧ್ಯೆ ಇರುವ ಬಂಡೆಯೊಂದರ ಮೇಲೆ ಧ್ಯಾನಸ್ಥರಾಗಿ ಕುಳಿತರು. ಎಚ್ಚೆತ್ತಾಗ ಪ್ರತಿಜ್ಞೆ ಮಾಡಿದರು 'ಇಂದಿನಿಂದ ನನಗೆ, ದೀನ, ದರಿದ್ರರೇ ದೇವರು: ರಾಷ್ಟ್ರಹಿತಕ್ಕಾಗಿ ಬದುಕು ಮೀಸಲು' ಎಂದು. ಶ್ರೀರಾಮಕೃಷ್ಣರ ಅವತಾರದ ಉದ್ದೇಶವನ್ನು ದೇಶ–ವಿದೇಶಗಳಲ್ಲಿ ಸಾರಿ ವಿಶ್ವವಿಜೇತರಾಗಿ, ಭಾರತಕ್ಕೆ ಹಿಂತಿರುಗಿದರು. ಈ ಅವತಾರದ ಉದ್ದೇಶಿತ ಕಾರ್ಯ ನಿರಂತರವಾಗಿ ಸಾಗಲು ಸಂನ್ಯಾಸಿಗಳ ಸಂಘವೊಂದನ್ನು ತಮ್ಮ ಗುರುದೇವರ ಹೆಸರಿನಲ್ಲಿ ಸ್ಥಾಪಿಸಿದರು. ಧ್ಯೇಯವಾಕ್ಯ 'ಆತ್ಮನೋ ಮೋಕ್ಷಾರ್ಥಂ, ಜಗದ್ಧಿತಾಯ ಚ'; ಹೊಸ ಸಂಪ್ರದಾಯವನ್ನು ಜಗತ್ತಿನ ಕಲ್ಯಾಣಕ್ಕಾಗಿ ತಂದರು. ಈ ಸಂಘದ ಶಾಖೆಗಳು ಇಡೀ ವಿಶ್ವದಲ್ಲಿ ಹರಡಿವೆ. ಆಧ್ಯಾತ್ಮಿಕ ಪರಂಪರೆಯ ಸಾಧುಗಳು ಮುಂದುವರಿಸುತ್ತಿದ್ದಾರೆ. ಗೃಹಸ್ಥರಿಗೂ, ಸಾಧುಸಂನ್ಯಾಸಿಗಳಿಗೂ ಶ್ರೀರಾಮಕೃಷ್ಣರ 'ವಚನವೇದ'ದ ಸಾರವನ್ನು ಪ್ರಚಾರ ಮಾಡುತ್ತಿದ್ದಾರೆ. 'ವಚನವೇದ' ಭವತಾರಕ ಮಂತ್ರವೆನ್ನಬಹುದು.

ಶ್ರೀರಾಮಕೃಷ್ಣರನ್ನು ಸೂಜಿಗಲ್ಲಿನಂತೆ ತನ್ನತ್ತ ಸೆಳೆದು, ಪರುಷ ಮಣಿಯಂತೆ ಪರಿಶುದ್ಧರನ್ನಾಗಿ ಪರಿವರ್ತಿಸಿ ಸಮಾಜದಲ್ಲಿ ಅವರನ್ನು ಕ್ರಾಂತಿಪುರುಷರನ್ನಾಗಿ ಮಾಡಿದಳು ಭವತಾರಿಣಿ! ಅವತಾರ ವರಿಷ್ಠರಾದ ಶ್ರೀರಾಮಕೃಷ್ಣರು ತಮ್ಮ 'ವಚನ'ಗಳಿಂದ ಸೆಳೆದು, ಜನರನ್ನು ಪರಿವರ್ತನೆಗೊಳಿಸಿ ಸಮಾಜದ ಕಲ್ಯಾಣಕ್ಕಾಗಿ ದುಡಿಯುವ ಭಕ್ತರ ಗುಂಪೊಂದನ್ನೇ ಸಿದ್ಧಗೊಳಿಸಿ ಪೂಜನೀಯರಾಗಿದ್ದಾರೆ. ಯಾವ ಮಾರ್ಗದಿಂದಲಾದರೂ ಭಗವಂತನನ್ನು ಪಡೆಯಬಹುದೆಂಬುದನ್ನು ಅವರು ಪ್ರಮಾಣೀಕರಿಸಿದ್ದಾರೆ. ಸರಳವಾಗಿ, ಸುಲಭವಾಗಿ ಅರಿಯಬಹುದಾಗಿರುವ 'ವಚನವೇದ'ದ ನುಡಿಗಳು ಭವತಾರಕ ಮಂತ್ರ! ಅವು ಸೂಜಿಗಲ್ಲಿನಂತೆ ನಮ್ಮನ್ನು ಸೆಳೆದು, ಪರುಷ ಮಣಿಯಂತೆ ಪರಿಶುದ್ಧರನ್ನಾಗಿ ಮಾಡುತ್ತದೆ.